ನೋಡಲು ಅವಕಾಶ ಕೊಡಲಿಲ್ಲ. ಕುಟುಂಬದಿಂದ ಯಾರಾದರೊಬ್ಬರು ಅಂತ್ಯಕ್ರಿಯೆಯನ್ನು ನೋಡಲು ಬರಬಹುದೆಂದು ಆಸ್ಪತ್ರೆಯಿಂದ ಸೂಚನೆ ಬಂದದ್ದರಿಂದ ಮೂವರು ಹೆಣ್ಣುಮಕ್ಕಳೇ ಇದ್ದ ಶಾಂತಮ್ಮ ಮಹಾಚಲಯ್ಯನ ಅಣ್ಣನ ಮಗ ಶೃಂಗರಾಜನನ್ನು ಬೇಡಿಕೊಂಡಳು. ಕನಿಷ್ಠ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಹಿಡಿದುಕೊಂಡದ್ದಲ್ಲದೆ ಕೊರೊನಾ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವಂತಿಲ್ಲ ಎಂಬ ಮಾಹಿತಿಯನ್ನು ಯಾರೋ ಅವಳಿಗೆ ಕೊಟ್ಟಿದ್ದರು. ಚಿನ್ನದ ಸರವನ್ನು ಅಡವಿಟ್ಟು ಅದನ್ನು ಹೊಂದಿಸಿದ್ದಾಯಿತು. ಶೃಂಗರಾಜನ ಕೈಗೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಇಟ್ಟು ಚಿಕ್ಕಪ್ಪನ ಅಂತ್ಯಸಂಸ್ಕಾರದಲ್ಲಿ ಹಾಜರಿರಲು ಒಪ್ಪಿಸಿ ಕಳುಹಿಸಿದಳು. ಮುಂದೆ ಮಹಾಚಲಯ್ಯನಿಗೆ ಪಿಂಡ ಹಾಕಬೇಕಾದರೆ ಶೃಂಗರಾಜನೇ ಹಾಕಬೇಕು ತಾನೇ!

ಶೃಂಗರಾಜ ಇಪ್ಪತ್ತೈದು ಸಾವಿರ ರೂಪಾಯಿಗಳಲ್ಲಿ ಇಪ್ಪತ್ತೆರಡು ಸಾವಿರ ರೂಪಾಯಿಗಳನ್ನು ತನಗೆ ಧರಿಸಲು ಕೊಟ್ಟ 'ಪಿಪಿಇ ಕಿಟ್' ಎನ್ನುವ ರಕ್ಷಣಾಕವಚಕ್ಕೆ ಕೊಡಬೇಕಾಯಿತು. ಎಲ್ಲರ ಹಾಗೆ ಶೃಂಗರಾಜ ತಾನೂ ಒಬ್ಬ ಕೊರೊನಾ ಯೋಧನಂತೆ ಪಿ.ಪಿ.ಇ. ಕಿಟ್ ಧರಿಸಿಕೊಂಡು ಗಗನಯಾತ್ರಿಕರು ಚಂದ್ರಲೋಕದ ಮೇಲೆ ನಡೆದಾಡುವಂತೆ ನಡೆದು, ಮುಖವಾಗಲಿ ದೇಹವಾಗಲಿ ಕಾಣದಂತೆ ಪ್ಲಾಸ್ಟಿಕ್ ಕವಚದೊಳಗೆ ಮರೆಯಾಗಿದ್ದ ಎನ್. ಪಿ. 2342 ನಂಬರಿನ ದೇಹವೇ ಮಹಾಚಲಯ್ಯನ ದೇಹವೆಂದು ಆಂಬುಲೆನ್ಸ್ ಕಂಡಕ್ಟರ್ ಓದಿ ಹೇಳಿದ ಕಾರಣ, ಗಗನಯಾತ್ರಿಕರಂತಿದ್ದ ನಾಲ್ಕು ಜನ ಕೊರೊನಾ ಯೋಧರು ಅದನ್ನು ನೈಲಾನ್ ರೋಪುಗಳ ಆಧಾರದಲ್ಲಿ ಜೆಸಿಬಿಯಲ್ಲಿ ಅಗೆದಿದ್ದ ಹೊಂಡಕ್ಕೆ ಇಳಿಸುವುದನ್ನು ಸ್ವಲ್ಪ ಹೆಚ್ಚಿನ ಭಯಭಕ್ತಿಯಿಂದ ವೀಕ್ಷಿಸಿ ಕೈಮುಗಿದ. ಅವನು ಮತ್ತೇನೂ ಮಾಡುವಂತಿರಲಿಲ್ಲ. ಅಂತೂ ಮೂರು ಸಾವಿರ ರೂಪಾಯಿಗಳಾದರೂ ಅವನಿಗೆ ಉಳಿದಂತಾಯಿತು.

ಅಲ್ಲಿ ಮಹಾಚಲಯ್ಯನ ಹಾಗೆ ಹುತಾತ್ಮರಾದ ಇನ್ನೂ ಇಬ್ಬರು ಮಹಾನುಭಾವರ ದೇಹಗಳಿದ್ದವು, ಅವುಗಳ ನಂಬರ್ ನೋಡಿ ಅವುಗಳ ವಾರಸುದಾರರು ಹೊಂಡಕ್ಕಿಳಿಸುವಾಗ ಕೈಮುಗಿದು ಕಳುಹಿಸಿಕೊಟ್ಟರು.

ಹೀಗೆ ಮಹಾಚಲಯ್ಯನ ಪಾರ್ಥಿವ ಶರೀರ ಪ್ಲಾಸ್ಟಿಕ್ ಹೊದಿಕೆಯೊಳಗೆ ಭದ್ರವಾಗಿ ಮಣ್ಣಿನೊಳಗೆ ಸೇರಿತು. ಇನ್ನು ಒಂದು ಮಿಲಿಯ ವರ್ಷಗಳ ನಂತರ ಯಾರೋ ಮಣ್ಣು ಅಗೆದಾಗ ಪಳೆಯುಳಿಕೆಯ ರೂಪದಲ್ಲಿ ಮಹಾಚಲಯ್ಯನ ಪ್ರತಿಕೃತಿ ಎದ್ದು ಬರಲೂಬಹುದು, ಹೇಳುವಂತಿಲ್ಲ. ಆತ್ಮ ಅವಿನಾಶಿಯೋ ಅಲ್ಲವೋ ಗೊತ್ತಿಲ್ಲ, ಪ್ಲಾಸ್ಟಿಕ್ ಅಂತೂ ಅವಿನಾಶಿಯಲ್ಲವೆ!

ಮಹಾಚಲಯ್ಯನ ಉತ್ತರಕ್ರಿಯಾದಿಗಳ ಬಗ್ಗೆ ಶಾಂತಮ್ಮ ಚಿಂತೆ ಮಾಡಿದಳು. ಕೆಲವರು ಅವಳಿಗೆ ಒಂದು ಸಲಹೆ ನೀಡಿದರು. ಭೂಕರ್ಣದಲ್ಲಿ ಉತ್ತರಕ್ರಿಯೆ ಮಾಡಿಸಿ ಪಿಂಡ ಹಾಕಿದರೆ ಸತ್ತವರು ಖಂಡಿತವಾಗಿ ಸ್ವರ್ಗಕ್ಕೆ ಹೋಗುತ್ತಾರೆ. ಆಮೇಲೆ ವರ್ಷವರ್ಷವೂ ತಿಥಿ ಮಾಡುವ ಅಗತ್ಯವಿಲ್ಲ.

ಗಂಡುಮಕ್ಕಳಿಲ್ಲದ ಶಾಂತಮ್ಮ ಮತ್ತೆ ಶೃಂಗರಾಜನಿಗೆ, ಚಿಕ್ಕಪ್ಪನಿಗೆ ಪಿಂಡಪ್ರದಾನ ಮಾಡಿ ಸದ್ಗತಿ ಕಾಣಿಸಬೇಕೆಂದು ದುಂಬಾಲುಬಿದ್ದಳು.

'ನಿನ್ನ ಚಿಕ್ಕಪ್ಪನಿಗೆ ಭೂಕರ್ಣದಲ್ಲಿ ಪಿಂಡ ಹಾಕಿ ಬಂದುಬಿಡು ಮಗಾ! ಅಲ್ಲಿ ಒಂದು ಸರ್ತಿ ಪಿಂಡ ಹಾಕಿದರೆ ಮತ್ತೆ ಪ್ರತಿವರ್ಷವೂ ತಿಥಿ ಮಾಡಬೇಕಾಗಿಲ್ಲವಂತೆ. ಅದೊಂದು ಮಾಡಿಬಿಟ್ಟರೆ ನಿನ್ನ ಚಿಕ್ಕಪ್ಪನಿಗೆ ಸದ್ಗತಿ ಆಗುತ್ತದೆ', ಎಂದು ಗೋಗರೆದಳು. ಅವನು ಕೂಡ ಅದೂ ಒಂದು ಅನುಭವ ಆಗಲಿ ಎಂದು ಭೂಕರ್ಣಕ್ಕೆ ಹೋಗಲು ಒಪ್ಪಿದ.

ಹಾಗೆ ಶಾಂತಮ್ಮ ಕೂಡಿಸಿಕೊಟ್ಟ ಹಣವನ್ನು ಹಿಡಿದುಕೊಂಡು ಶೃಂಗರಾಜ ಭೂಕರ್ಣಕ್ಕೆ ಬಂದ.

***

ಶೃಂಗರಾಜನ ಬಳಿ ಅವನ ಚಿಕ್ಕಪ್ಪನ ಅಸ್ಥಿಗಳ ಸಂಚಯ ಇರಲಿಲ್ಲ. ಸ್ವರ್ಗಸ್ಥರಾದವರ ಅಸ್ಥಿಯನ್ನು ಹಿಡಿದುಕೊಂಡು ಭೂಕರ್ಣಕ್ಕೆ ಹೋಗಬೇಕು ಎಂದು ಯಾರೋ ಸಲಹೆ ನೀಡಿದ್ದರು. ಈಗ ಅಸ್ಥಿ ಇಲ್ಲ ಎಂದು ಗೊತ್ತಾದ ಮೇಲೆ ಇನ್ನು ಯಾರೋ, 'ಅದು ಪರವಾಗಿಲ್ಲ, ಏನನ್ನಾದರೂ ಸಾಂಕೇತಿಕವಾಗಿ ಇಟ್ಟುಕೊಂಡು ಮಂತ್ರದಲ್ಲಿಯೇ ಅಸ್ಥಿಯನ್ನು ಕಲ್ಪಿಸಿ ವಿಧಿಗಳನ್ನು ಮಾಡಿ ಮೃತ ಆತ್ಮನಿಗೆ ಸ್ವರ್ಗದ ದಾರಿ ತೋರಿಸುತ್ತಾರೆ' ಎಂದು ವಿಕಲ್ಪ ಸೂಚನೆ ನೀಡಿದ್ದರು.

ಶೃಂಗರಾಜನಿಗೆ ಅಸ್ಥಿಗಳಿಲ್ಲದ ಕಾರಣಕ್ಕೆ ಯಾವ ಸಮಸ್ಯೆಯೂ ಆಗದಿದ್ದರೂ ಸಾರ್ವಜನಿಕವಾಗಿ ಪಿಂಡ ಹಾಕುವುದಕ್ಕೆ ಭೂಕರ್ಣದಲ್ಲಿ ಅವಕಾಶ ಇರಲಿಲ್ಲ. ಪಿಂಡ ಹಾಕುವುದಕ್ಕೆ ಅಥವಾ ಯಾವುದೇ ಧಾರ್ಮಿಕ ಅಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಲಾಕ್‌ಡೌನ್ ಪ್ರಯುಕ್ತ ನಿರ್ಬಂಧವಿತ್ತು. ಹಾಗಾಗಿ ಅಲ್ಲಿನ ಸಮುದ್ರ ಬದಿಯಲ್ಲಿ ಪಿಂಡ ಹಾಕುವವರನ್ನು ಹಿಡಿಯಲು ಪೊಲೀಸರ ದಾಳಿ ನಡೆಯುತ್ತಿತ್ತು.

ಅಷ್ಟು ದೂರ ಬಂದದ್ದು ವ್ಯರ್ಥವಾಯಿತೆಂದು ಶೃಂಗರಾಜನಿಗೆ ಅನಿಸಿತು. ಆದರೂ ಪ್ರಯತ್ನಿಸೋಣವೆಂದು ಒಂದು ರಿಕ್ಷಾ ಹಿಡಿದು ಪೇಟೆಯಿಂದ ಎರಡು ಕಿಲೋಮೀಟರ್ ದೂರವಿದ್ದ ಸಮುದ್ರದ ತೀರಕ್ಕೆ ಬಂದು ಇಳಿದ. ಯಾರಾದರೂ ಪುರೋಹಿತರು ಅಲ್ಲಿ ಸಿಕ್ಕರೂ ಸಿಗಬಹುದು ಎಂದು ಭೂಕರ್ಣದ ಬಸ್ ನಿಲ್ದಾಣದಲ್ಲಿ ಯಾರೋ ಸಲಹೆ ಕೊಟ್ಟಿದ್ದರು.

ಉದ್ದಕ್ಕೆ ಹಬ್ಬಿದ್ದ ಸಮುದ್ರ ತೀರ ನಿರ್ಜನವಾಗಿತ್ತು. ಎಲ್ಲಿಯೂ ಉತ್ತರಕ್ರಿಯೆ ನಡೆಯುತ್ತಿದ್ದ ಸೂಚನೆ ಇರಲಿಲ್ಲ. ಶೃಂಗರಾಜ ಅಲ್ಲಿದ್ದ ಒಂದು ಮೀನುಗಾರನ ಗುಡಿಸಲಿನೆದುರು ನಿಂತು ಮನೆಯವರನ್ನು ಹೊರಗೆ ಕರೆದಾಗ ಹೊರಗೆ ಬಂದ ಮೀನುಗಾರನ ಬಳಿ, 'ಇಲ್ಲಿ ಯಾರಾದರೂ ಪುರೋಹಿತರು ಸಿಗಬಹುದೆ? ಇದೇ ದಿನ ಒಂದು ಪಿಂಡ ಹಾಕಿಸಬೇಕಾಗಿತ್ತು' ಎಂದ.

ಮೀನುಗಾರ, 'ನೀವು ಹೀಗೆಯೇ ಸಮುದ್ರದ ಬದಿಯಲ್ಲಿ ಎಡಗಡೆಗೆ ಸುಮಾರು ಅರ್ಧ ಮುಕ್ಕಾಲು ಮೈಲು ನಡೆದುಕೊಂಡು ಹೋಗಿ. ಅಲ್ಲಿ ಒಂದು ಬೆಟ್ಟ ಇದೆ. ಅದರ ಬದಿಯಲ್ಲಿ ಒಂದು ಗುಹೆ ಇದೆ. ಅದರೊಳಗೆ ಒಬ್ಬರು ಪುರೋಹಿತರು ಅಡಗಿಕೊಂಡಿರುತ್ತಾರೆ. ನೀವು ಗುಹೆಯ ಬಾಯಿಗೆ ಹೋಗಿ ಕರೆದರೆ ಹೊರಗೆ ಬರುತ್ತಾರೆ' ಎಂದ.

ಹಾಗೆಯೇ ನಡೆಯುತ್ತಾ ಹೋದಾಗ ಬೆಟ್ಟವೂ, ಅದರ ಕಿಬ್ಬಿಯಲ್ಲಿದ್ದ ಗುಹೆಯೂ ಕಂಡಿತು. ಶೃಂಗರಾಜ ಅಲ್ಲಿಗೆ ಹತ್ತಿಕೊಂಡು ಹೋಗುವ ದಾರಿ ಯಾವುದೆಂದು ನೋಡುತ್ತಿದ್ದಾಗ, ಕುರುಚಲು ಗಿಡಗಳ ಮರೆಯಿಂದ ಹುಡುಗನೊಬ್ಬ ಹೊರಗೆ ಬಂದು ಇವನನ್ನು ಸಮೀಪಿಸಿದ.

'ಇಲ್ಲಿ ಪಿಂಡ ಹಾಕಿಸುವ ಪುರೋಹಿತರು ಎಲ್ಲಿರುತ್ತಾರೆ ಮಾರಾಯ? ಅವರನ್ನು ಸ್ವಲ್ಪ ಕರೆದುಕೊಂಡು ಬರುತ್ತೀಯಾ?' ಎಂದು ಶೃಂಗರಾಜ ಕೇಳಿದ.

'ಹಾ... ಈಗಲೇ ಕರೆದುಕೊಂಡು ಬರುತ್ತೇನೆ...' ಎಂದು ಹುಡುಗ ಗುಹೆಯತ್ತ ಹೋಗುವ ಕಾಲುದಾರಿಯಲ್ಲಿ ಓಡಿಹೋದ. ಇಪ್ಪತ್ತು ಮಿನಿಟು ಕಳೆದಾಗ ಪುರೋಹಿತರು ಒಂದು ಕೈಯಲ್ಲಿ ಹರಿವಾಣ, ಕೌಳಿಗೆ, ಸೌಟು; ಇನ್ನೊಂದು ಕೈಯಲ್ಲಿ ಒಂದು ತಾಮ್ರದ ಕೊಡಪಾನ ತಂಬಿಗೆಯಲ್ಲಿ ಶುದ್ಧೋದಕವನ್ನು ಹಿಡಿದುಕೊಂಡು ಇವನತ್ತ ಬರುವುದು ಕಂಡಿತು. ಅವರ ಹಿಂದಿನಿಂದ ಅವರನ್ನು ಕರೆದುಕೊಂಡು ಬರಲು ಹೋದ ಹುಡುಗ ತಲೆಯಲ್ಲಿ ಒಂದು ಕೌಳಿಗೆಯಲ್ಲಿ ಪಿಂಡಕ್ಕೆ ಬೇಕಾದ ನೈವೇದ್ಯವನ್ನೂ, ಇನ್ನೊಂದು ಸಂಗೀಸಿನ ಚೀಲದಲ್ಲಿ ದರ್ಭೆ, ಎಳ್ಳು, ಹಣ್ಣುಕಾಯಿ ಇತ್ಯಾದಿ ಇತರ ಪೂಜಾ ಸಾಮಗ್ರಿಗಳನ್ನೂ ಹಿಡಿದುಕೊಂಡು ಬರುತ್ತಿದ್ದ. ಓಹೋ! ಹಾಗಾದರೆ ಪುರೋಹಿತರೇ ತಮ್ಮ ಸಹಾಯಕನನ್ನು ಇಲ್ಲಿ ನಿಲ್ಲಿಸಿದ್ದರು; ಪಿಂಡ ಹಾಕಿಸುವವರು ಬಂದರೆ ತಮ್ಮನ್ನು ಕರೆಯಲು ಏರ್ಪಾಡು ಮಾಡಿ ತಾವು ಗುಹೆಯಲ್ಲಿ ಅಡಗಿಕೊಂಡಿದ್ದರು ಎಂದು ಶೃಂಗರಾಜ ಊಹಿಸಿದ.

ಹತ್ತಿರ ಬಂದ ಅವರು 'ತಮ್ಮ ಹೆಸರು ಪರಮಧಾಮಿ ಸ್ವಾಮಿಗಳು' ಎಂದು ಪರಿಚಯಿಸಿಕೊಂಡರು. ಅವರು ಆಮೇಲೆ ಮಾತಾಡುತ್ತಾ ತಿಳಿಸಿದ ಪ್ರಕಾರ ಕಳೆದ ವಾರ ಅವರು ಪಿಂಡ ಹಾಕಿಸುತ್ತಿದ್ದಾಗ ಪೊಲೀಸರು ರೈಡ್ ಮಾಡಿ, ಕರ್ಫ್ಯೂ ಉಲ್ಲಂಘಿಸಿದ್ದಕ್ಕೆ ದಂಡ ಕೊಡಬೇಕೆಂದು ಒಂದು ಸಾವಿರ ಹಿಡಿದುಕೊಂಡು ಹೋಗಿದ್ದರಂತೆ. ಈ ದಿನವೂ ಬೆಳಿಗ್ಗೆ ಹತ್ತು ಗಂಟೆಯ ಹೊತ್ತಿಗೆ ಪೊಲೀಸನೊಬ್ಬ ಪಿಂಡ ಹಾಕುವ ಬೀಚಿನ ಉದ್ದಕ್ಕೂ ನಡೆದುಕೊಂಡು ಹೋಗಿದ್ದನಂತೆ.

'ಇಲ್ಲಿ ಬೇರೆ ಪುರೋಹಿತರೂ ಇದ್ದಾರಾ?' ಶೃಂಗರಾಜ ಕೇಳಿದ.

'ಇದ್ದಾರೆ. ಅವಶ್ಯಕತೆ ಇದ್ದರೆ ಮಾತ್ರ ಹೊರಗೆ ಕಾಣಿಸಿಕೊಳ್ಳುತ್ತಾರೆ. ಓ ಅಲ್ಲಿ ದೋಣಿ ಮನೆ ಇದೆಯಲ್ಲ, ಅದರೊಳಗೆ ಅನ್ನಧಾಮಿ ಸ್ವಾಮಿಗಳು ಕುಳಿತಿದ್ದಾರೆ. ನನಗೂ ಸಹಾಯಕ್ಕೆ ಬೇಕಾದರೆ ಅವರನ್ನು ಕರೆಯುತ್ತೇನೆ' ಎಂದು ಪರಮಧಾಮಿ ಸ್ವಾಮಿಗಳು ತಿಳಿಸಿದರು.

'ಓಹ್! ಹಾಗೋ' ಎಂದು ಶೃಂಗರಾಜ ತಾನು ಬಂದ ಉದ್ದೇಶವನ್ನೆಲ್ಲ ಹೇಳಿದ.

ಪರಮಧಾಮಿ ಸ್ವಾಮಿಗಳು, 'ಈಗ ಬೇಗ ನಮ್ಮ ಕೆಲಸ ಆಗಬೇಕು... ಮತ್ತೆ ಪೊಲೀಸರು ಬಂದರೆ ನಿಮಗೇ ತೊಂದರೆ ಅಲ್ಲವೇ? ಬನ್ನಿ, ಪಂಚೆ